# ಹುಬ್ಬಳ್ಳಿ- ಧಾರವಾಡ ಬಿಆರ್‌ಟಿಎಸ್ ಕಂಪನಿ. ನಿ.

**ಕಛೇರಿ: ಎನ್.ಡಬ್ಲೂ.ಕೆ.ಆರ್.ಟಿ.ಸಿ ಬಸ್ ಟರ್ಮಿನಲ್,ಬಿ.ಬ್ಲಾಕ್, 2ನೇ ಮಹಡಿ, ಹೊಸ ಕೊರ್ಟ ಕಟ್ಟಡದ ಹತ್ತಿರ, ಹೊಸೂರು ಹುಬ್ಬಳ್ಳಿ ದೂರವಾಣಿ:0836-2222007/8 ಫ್ಯಾಕ್ಸ: 0836-23000700**

**ಇಮೇಲ್: hdbrts@gmail.com**


---

ಹೆಚ್‌ಡಿಬಿಆರ್‌ಟಿಎಸ್/ಆಡಳಿತ/ವಿಡಿಯೋ/2018-19 ದಿನಾಂಕ: 28.11.2018

## ವಿಡಿಯೋ ಚಿತ್ರೀಕರಣದ ಸ್ಪರ್ಧೆ

ಹುಬ್ಬಳ್ಳಿ-ಧಾರವಾಡ ಬಿಆರ್‌ಟಿಎಸ್ ಯೋಜನೆಯ ಕುರಿತು 10-15 ನಿಮಿಷದ ಸಾರ್ವಜನಿಕರು ಮತ್ತು ಪ್ರಯಾಣಿಕರ ಸಮಗ್ರ ಮಾಹಿತಿಯನ್ನು ನೀಡುವ ವೀಡಿಯೋ ಚಿತ್ರೀಕರಣವನ್ನು ಚಿತ್ರೀಕರಿಸಲು ಆಸಕ್ತ ವೀಡಿಯೋಗ್ರಾಫರ್‌ಗಳಿಂದ, ಸಂಘ ಸಂಸ್ಥೆಗಳಿಂದ, ಶಿಕ್ಷಣ ಸಂಸ್ಥೆಗಳಿಂದ, ವಿದ್ಯಾರ್ಥಿಗಳಿಂದ ಸ್ಪರ್ದೆಯನ್ನು ಅಹ್ವಾನಿಸಲಾಗಿದೆ ಉತ್ತಮ ವಿಡಿಯೋಗಳಿಗೆ ಈ ಕೆಳಗಿನಂತೆ ನಗದು ಬಹುಮಾನವನ್ನು ನೀಡಲಾಗುವುದು.

| | |
|---|---|
| **ಮೊದಲ ಬಹುಮಾನ** | **ರೂ. 1,50,000 (ಒಂದು ಲಕ್ಷದ ಐವತ್ತು ಸಾವಿರ)** |
| **ಎರಡನೆಯ ಬಹುಮಾನ** | **ರೂ. 1,00,000 (ಒಂದು ಲಕ್ಷ)** |
| **ಮೂರನೆಯ ಬಹುಮಾನ** | **ರೂ. 50,000 (ಐವತ್ತು ಸಾವಿರ ರೂಪಾಯಿ)** |

- ಈ ಮೇಲಿನ ಬಹುಮಾನಗಳನ್ನು ಹೊರತು ಪಡಿಸಿ ಮೊದಲನೆಯ ಸುತ್ತಿನಲ್ಲಿ ಆಯ್ಕೆಯಾದ ಉತ್ತಮ 7 ವಿಡಿಯೋಗಳಿಗೆ ರೂ 10,000 ದಂತೆ ಪ್ರೋತ್ಸಾಹಧನ ಸಹ ನೀಡಲಾಗುವುದು.

**ಷರತ್ತುಗಳು:**

1. ಕಿರು ಚಿತ್ರೀಕರಣದ ಸ್ಪರ್ದೆಯು ಕಂಪನಿಯ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.
2. ಸ್ಪರ್ದೆಗೆ ದಾಖಲಿಸಲು ಕೊನೆಯ ದಿನಾಂಕ: 05.12.2018
3. ಕಿರು ಚಿತ್ರೀಕರಣವನ್ನು ಚಿತ್ರೀಕರಿಸಿ ಕಛೇರಿಗೆ ಸಲ್ಲಿಸಲು ಕೊನೆಯ ದಿನಾಂಕ:15.12.2018
4. ಹೆಚ್ಚಿನ ಮಾಹಿತಿಗಾಗಿ ಕಛೇರಿಯ www.hdbrts.co.in ವೆಬ್‌ಸೈಟ್‌ನಲ್ಲಿ ಸಮಗ್ರ ಮಾಹಿತಿಯನ್ನು ಪಡೆಯಬಹುದಾಗಿದೆ ಹಾಗೂ ಈ ಕಛೇರಿಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಇವರನ್ನು ಸಂಪರ್ಕಿಸುವುದು (ಮೊಬೈಲ್ ನಂ: 9900081661)

-ಸಹಿ-
ವ್ಯವಸ್ಥಾಪಕ ನಿರ್ದೇಶಕರು,
ಹೆಚ್‌ಡಿಬಿಆರ್‌ಟಿಎಸ ಕಂ.ನಿ ಹುಬ್ಬಳ್ಳಿ

# ಹುಬ್ಬಳ್ಳಿ– ಧಾರವಾಡ ಬಿಆರ್‌ಟಿಎಸ್ ಕಂಪನಿ. ನಿ.

**ಕಛೇರಿ: ಎನ್.ಡಬ್ಲ್ಯೂ.ಕೆ.ಆರ್.ಟಿ.ಸಿ ಬಸ್ ಟರ್ಮಿನಲ್,ಬಿ.ಬ್ಲಾಕ್, 2ನೇ ಮಹಡಿ, ಹೊಸ ಕೋರ್ಟ ಕಟ್ಟಡದ ಹತ್ತಿರ,**

**ಹೊಸೂರು ಹುಬ್ಬಳ್ಳಿ ದೂರವಾಣಿ:0836–2222007/8 ಫ್ಯಾಕ್ಸ: 0836–2322700 ಇಮೇಲ್: *hdbrts@gmail.com***

---

## ವಿಡೀಯೋ ಚಿತ್ರೀಕರಣದ ಸ್ಪರ್ಧೆಯ ಅರ್ಜಿ ನಮೂನೆ
## (Application Form)

Photo

1. ಹೆಸರು (Name) :

2. ವಿಳಾಸ (Address) :

3. ಇ–ಮೇಲ್ (E-mail) :

4. ದೂರವಾಣಿ ಸಂಖ್ಯೆ (Phone Number ) :

5. ಅನುಭವ (Experience) : 1)

   2)

   3)

6. ಕ್ಯಾಮರ/ಹ್ಯಾಂಡಿ ಕ್ಯಾಮ್ (Camera/Handy Cam) :

7. ಆಧಾರ (Aadhar) :

–ಸಹಿ–

## ಷರತ್ತುಗಳು:(Terms and Conditions)

**ವಿ.ಸೂಚನೆ:** ಕಿರು ಚಿತ್ರೀಕರಣದಲ್ಲಿ ಮುಖ್ಯವಾಗಿ ಬಿಆರ್‌ಟಿಯನ್ನು ಪ್ರಯಾಣಿಕರು ಹೇಗೆ ಉಪಯೋಗಿಸಿಕೊಳ್ಳಬೇಕು ಅಂದರೆ ಪ್ರಯಾಣಿಕರು ಪಾದಚಾರಿಮಾರ್ಗವನ್ನು ಬಳಸಿಕೊಂಡು ಜೀಬ್ರಾಕ್ರಾಸ್‌ನ್ನು ದಾಟಿ ಬಸ್ ನಿಲ್ದಾಣಕ್ಕೆ ಹೇಗೆ ಬರಬೇಕು ಮತ್ತು ಬಸ್‌ನಿಲ್ದಾಣದಲ್ಲಿ ಟಿಕೇಟನ್ನು ಪಡೆದುಕೊಂಡು ಫ್ಲಾಪ್‌ಗೇಟಿಗೆ ಟಿಕೇಟ್‌ನ್ನು ಹೇಗೆ ತೋರಿಸಿ ಒಳಬರುವ ಹಾಗೂ ಹೊರ ಹೋಗುವ ಮತ್ತು ಬಸ್‌ನಿಲ್ದಾಣದಲ್ಲಿ ಬಸ್‌ನ್ನು ಹತ್ತುವ ಮುನ್ನ ಪಿ.ಎಸ್.ಡಿ ದ್ವಾರಗಳ ಮೂಲಕ ಪ್ರಯಾಣಿಕರು ಬಸ್ಸಿನ ಒಳಗೆ ಮತ್ತು ಹೋರಗೆ ಬರುವುದುದನ್ನು, ಹಾಗೂ ಸಿಗ್ನಲ್‌ಗಳು ಕ್ಯೂಟ್ ಯಂತ್ರದ ಮೂಲಕ ಹೇಗೆ ಕಾರ್ಯನಿರ್ವಹಿಸುವವು, ಹಾಗೂ ಬಿಆರ್‌ಟಿ ಬಸ್ಸುಗಳಲ್ಲಿ ಪ್ರಯಾಣಿಕರಿಗಾಗಿ ಹೊಂದಿರುವ ಮೂಲ ಸೌಕರ್ಯಗಳ ಬಗ್ಗೆ , ಬಸ್ ನಿಲ್ಧಾಣದಿಂದ ವೃದ್ದರು ಅಂಗವಿಕಲರು ಗಾಲಿಖುರ್ಚಿಯನ್ನು ತೆಗೆದುಕೊಂಡು ಬಸ್ಸಿನ ಒಳಗೆ ಹೇಗೆ ಹೋಗಬೇಕು ಎಂಬುವುದನ್ನು ಮುಖ್ಯವಾಗಿ ಚಿತ್ರಿಕರಿಸಬೇಕು.

1. ಕಿರು ಚಿತ್ರೀಕರಣದ ಸ್ಪರ್ದೆಯು ಕಂಪನಿಯ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.
2. ಕಿರು ಚಿತ್ರವು 10–15 ನಿಮಿಷದ ಅವಧಿಯನ್ನು ಹೊಂದಿರಬೇಕು.
3. ಸ್ಪರ್ದೆಗೆ ದಾಖಲಿಸಲು ಕೊನೆಯ ದಿನಾಂಕ: 05.12.2018
4. ಕಿರು ಚಿತ್ರೀಕರಣದ ಸಮಯದಲ್ಲಿ ಭದ್ರತೆ ಹಾಗೂ ಮುಂಜಾಗೃತಿಯನ್ನು ತಾವೇ ನಿರ್ವಹಿಸಿಕೊಳ್ಳುವುದು.
5. ಕಿರು ಚಿತ್ರೀಕರಣವನ್ನು ಚಿತ್ರೀಕರಿಸಿ ಕಛೇರಿಗೆ ಸಲ್ಲಿಸಲು ಕೊನೆಯ ದಿನಾಂಕ: 15.12.2018
6. ಕಿರು ಚಿತ್ರೀಕರಣವು ಹೆಚ್‌ಡಿ ಗುಣಮಟ್ಟದ್ದಾಗಿರಬೇಕು. ಅದಕ್ಕೆ ಸಂಬಂಧಿಸಿದ ತಿದ್ದುಪಡಿಗಳಿಗೆ ಅವಕಾಶವಿರಬೇಕು
7. ಕಿರು ಚಿತ್ರೀಕರಣವು ಕನ್ನಡ ಮತ್ತು ಇಂಗ್ಲೀಷ ಭಾಷೆಯಲ್ಲಿರಬೇಕು.
8. ಕಿರು ಚಿತ್ರದಲ್ಲಿ ಬಿಆರ್‌ಟಿಎಸ್‌ಗೆ ಸಂಬಂಧಿಸಿದ ವಿಷಯಗಳನ್ನು ಒಳಗೊಂಡಿರಬೇಕು ಹೊರತಾಗಿ ಯಾವುದೇ ಧಾರ್ಮಿಕತೆಯ ವಿಷಯವಾಗಲೀ, ಜಾಹೀರಾತುಗಳಾಗಲಿ, ಇರಕೂಡದು.
9. ಕಿರು ಚಿತ್ರದಲ್ಲಿ ತಮ್ಮ ಸಂಸ್ಥೆಯ ಹೆಸರಾಗಲಿ ಅಥವಾ ತಮ್ಮ ಹೆಸರರಾಗಲಿ ಹಾಕಕೂಡದು.
10. ಕಿರು ಚಿತ್ರದಲ್ಲಿ ಯಾವುದೇ ಹಾಡಿನ ಹಿನ್ನೇಲೆಯನ್ನು ಅಳವಡಿಸುವುದು ನಕಲು ಮಾಡುವುದನ್ನು ನಿಷೇದಿಸಿದೆ.
11. ಸ್ಪರ್ಧೆಗೆ ಭಾಗವಹಿಸುವ ಸ್ಪರ್ಧಾಳುಗಳು ಹೆಚ್‌ಡಿಬಿಆರ್‌ಟಿಎಸ್ ಕಂಪನಿಯ ವೆಬ್‌ಸೈಟ್ ನಿಂದ ಅರ್ಜಿ ನಮೂನೆಯನ್ನು ಮತ್ತು ಸಂಬಂಧಿಸಿದ ಮಾಹಿತಿಯನ್ನು ಡೌನ್‌ಲೋಡ್ ಮಾಡಿಕೊಳ್ಳುವುದು
12. ಸ್ಪರ್ಧಿಗಳು ಚಿತ್ರೀಕರಣ ಮಾಡುವ ಸಮಯ ಮತ್ತು ದಿನಾಂಕವನ್ನು ಮುಂಚಿತವಾಗಿ ಈ ಕಛೇರಿಗೆ ತಿಳಿಸಬೇಕು.
13. ಚಿತ್ರೀಕರಣ ಮಾಡುವ ವಿಷಯ ಮತ್ತು ಗುರುತಿನ ಚೀಟಿಯನ್ನು ಕಛೇರಿಯಿಂದ ಪಡೆದುಕೊಳ್ಳತಕ್ಕದ್ದು
14. ಚಿತ್ರೀಕರಣದ ಸಮಯದಲ್ಲಿ ಕಛೇರಿಯಿಂದ ಯಾವುದೇ ಉಪಕರಣಗಳನ್ನು ನೀಡುವುದಿಲ್ಲ.
15. ಚಿತ್ರೀಕರಿಸಿದ ವಿಡೀಯೋ ಡಿವಿಡಿ (3 Copy) ಮೂಖಾಂತರ ಕಛೇರಿಗೆ ಸಲ್ಲಿಸಬೇಕು. ಮತ್ತು ಕಛೇರಿಯ ಅನುಮತಿ ಇಲ್ಲದೆ ಯಾವುದೇ ಮಾದ್ಯಮಗಳಲ್ಲಿ ಅಳವಡಿಸಕೂಡದು.
16. ಕಛೇರಿಗೆ ಸಲ್ಲಿಸಿದ ಕಿರುಚಿತ್ರಗಳು ಹೆಚ್‌ಡಿಬಿಆರ್‌ಟಿಎಸ್ ಕಂಪನಿಯ ಒಡೆತನಕ್ಕೆ ಸೇರಿದವಗಳಾಗಿರುತ್ತವೆ.
17. ಚಿತ್ರೀಕರಣದ ಆಯ್ಕೆಯ ಅಂತಿಮ ನಿರ್ದಾರ ಮತ್ತು ರದ್ದುಗೊಳಿಸುವ ನಿರ್ಧಾರ ಕಂಪನಿಯ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

**ಚಿತ್ರೀಕರಣದ ವ್ಯಾಪ್ತಿ.(Scope of Video)**

## ಅನುಬಂಧ–01

## ಬಿಆರ್‌ಟಿಎಸ್‌ನ ಮೂಲಸೌಕರ್ಯಗಳು

- ಹುಬ್ಬಳ್ಳಿಯ ಹೊಸ ಬಸ್ ನಿಲ್ದಾಣದ ಪಕ್ಕದಲ್ಲಿ ಒಂದು ಡಿಪೋ, ಮತ್ತು ಅದರ ಕಾರ್ಯಾ ವೈಖರಿ.
- ಹುಬ್ಬಳ್ಳಿಯ ಗೋಕುಲ ರಸ್ತೆಯ ವಾ.ಕ.ರ.ಸಾ.ಸಂಸ್ಥೆಯ ಡಿಪೋ ಹಿಂದುಗಡೆ ನಿರ್ಮಿಸಿರುವ ವಿಭಾಗೀಯ ಕಾರ್ಯಗಾರ, ಮತ್ತು ಅದರ ಕಾರ್ಯಾ ವೈಖರಿ.
- ಹೊಸೂರಿನಲ್ಲಿ ನಿರ್ಮಿಸಿರುವ ಟರ್ಮಿನಲ್ ಮತ್ತು ಅದರ ಕಾರ್ಯಾ ವೈಖರಿ.
- ಹುಬ್ಬಳ್ಳಿ ರೈಲ್ವೆ ನಿಲ್ದಾಣದಿಂದ ಧಾರವಾಡದ ಜುಬ್ಲಿ ವೃತ್ತದವರೆಗೆ ಒಟ್ಟು 32 ಬಸ್ ನಿಲ್ದಾಣಗಳು ಮತ್ತು ಅದರ ಕಾರ್ಯಾ ವೈಕರಿಗಳು ಮತ್ತು ಪ್ರಯಾಣಿಕರಿಗಾಗಿ ಅಳವಡಿಸಿರುವ ಸೌಲತ್ತುಗಳ ಬಗ್ಗೆ
- ಧಾರವಾಡದ ಹೊಸ ಬಸ್ ನಿಲ್ದಾಣದ ಪಕ್ಕದಲ್ಲಿ ನಿರ್ಮಿಸಿರುವ ಡಿಪೋ ಮತ್ತು ಅದರ ಕಾರ್ಯಾ ವೈಖರಿ.
- ಧಾರವಾಡದ ಹಳೇ ಬಸ್ ನಿಲ್ದಾಣದ ಪಕ್ಕದಲ್ಲಿ ನಿರ್ಮಿಸಿರುವ ಬಿಆರ್‌ಟಿಎಸ್ ಬಸ್ ಟರ್ಮಿನಲ್ ಮತ್ತು ಅದರ ಕಾರ್ಯಾ ವೈಖರಿ.
- ನವನಗರ, ಉಣಕಲ್ ಕ್ರಾಸ್, ಹಾಗೂ ಉಣಕಲ್ ಈ ಮೂರು ಸ್ಥಳಗಳಲ್ಲಿ ಬಿಆರ್‌ಟಿಎಸ್ ಬಸ್‌ಗಳಿಗಾಗಿ ಒಟ್ಟು 3 ಮೇಲ್ ಸೇತುವೆಗಳು (ಫ್ಲೈ ಓವರ್) ನಿರ್ಮಿಸಲಾಗಿದೆ.
- ಹೆಚ್‌ಡಿಬಿಆರ್‌ಟಿಎಸ್ ರಸ್ತೆಗಳು ಮತ್ತು ಮಿಶ್ರಪಥದ ರಸ್ತೆಗಳು
- ಪಾದಚಾರಿ ಮೇಲ್‌ಸೇತುವೆಗಳು. ಮತ್ತು ಅವುಗಳ ಕಾರ್ಯಾವೈಖರಿಗಳ ಬಗ್ಗೆ

1) ಹೊಸೂರು ಬಸ್ ನಿಲ್ದಾಣಕ್ಕೆ ಹೊಂದಿಕೊಂಡು ನಿರ್ಮಿಸಿರುವ ಪಾದಚಾರಿ ಮೇಲ್ ಸೇತುವೆ
2) ಪ್ರೇಣಾ ಕಾಲೇಜ್ ಬಸ್ ನಿಲ್ದಾಣಕ್ಕೆ ಹೊಂದಿಕೊಂಡ ನಿರ್ಮಿಸಿರುವ ಪಾದಚಾರಿ ಮೇಲ್ ಸೇತುವೆ
3) ಉಣಕಲ್ ಬಸ್ ನಿಲ್ದಾಣಕ್ಕೆ ಹೊಂದಿಕೊಂಡ ನಿರ್ಮಿಸಿರುವ ಪಾದಚಾರಿ ಮೇಲ್ ಸೇತುವೆ
4) ನವ ನಗರ ಬಸ್ ನಿಲ್ದಾಣಕ್ಕೆ ಹೊಂದಿಕೊಂಡ ನಿರ್ಮಿಸಿರುವ ಪಾದಚಾರಿ ಮೇಲ್ ಸೇತುವೆ
5) ರಾಯಾಪೂರ ಇಸ್ಕಾನ್ ದೇವಸ್ಥಾನಕ್ಕೆ ಹೊಂದಿಕೊಂಡ ನಿರ್ಮಿಸಿರುವ ಪಾದಚಾರಿ ಮೇಲ್ ಸೇತುವೆ
6) ಸತ್ತೂರಿನ ಎಸ್‌ಡಿಎಮ್ ವೈದ್ಯಕೀಯ ಕಾಲೇಜ್ ಬಸ್ ನಿಲ್ದಾಣಕ್ಕೆ ಹೊಂದಿಕೊಂಡ ನಿರ್ಮಿಸಿರುವ ಪಾದಚಾರಿ ಮೇಲ್ ಸೇತುವೆ ಹೀಗೆ 6 ಸ್ಥಳಗಳಲ್ಲಿ ಪಾದಾಚಾರಿ ಮೇಲುಸೇತುವೆ (Foot Over Bridge) ನಿರ್ಮಿಸಿ ಪ್ರಯಾಣಿಕರು ಸುಲಭವಾಗಿ ರಸ್ತೆ ದಾಟಲು ಅನುಕೂಲ ಕಲ್ಪಿಸಲಾಗಿದೆ.

- ಹಸಿರು ಬಿಆರ್‌ಟಿಎಸ್ ಯೋಜನೆಯಲ್ಲಿ ನಟ್ಟ ಗಿಡಗಳ ಸ್ಥಳಗಳ ಬಗ್ಗೆ
- ಹೈ ಮಾಸ್ಟಗಳ ಬಗ್ಗೆ
- ಪಾದಚಾರಿ ಮಾರ್ಗಗಳ ಬಗ್ಗೆ.

## ಅನುಬಂಧ–02

- ಐಟಿಎಸ್(ಚತುರ ಸಾರಿಗೆ ವ್ಯವಸ್ಥೆ)ಯು ಬಿಆರ್‌ಟಿಎಸ್‌ಗೆ ಹೇಗೆ ಕಾರ್ಯನಿರ್ವಹಿಸುವುದು ಎಂಬುದರ ಬಗ್ಗೆ.
- ಹೆಚ್‌ಡಿಬಿಆರ್‌ಟಿಎಸ್ ಓಲ್ವೋ ಬಸ್ಸುಗಳ ಸಂಚಾರ ಮತ್ತು ಅವುಗಳ ಸಾರ್ವಜನಿಕರಿಗೆ ಹೇಗೆ ಕಾರ್ಯಾನಿರ್ವಹಿಸುವವು ಮತ್ತು ಅವುಗಳಲ್ಲಿ ಅಳವಡಿಸಿರುವ ಸೌಲಭ್ಯಗಳ ಬಗ್ಗೆ
- ಪ್ರಯಾಣಿಕರು ಪಾದಚಾರಿಗಳಿಂದ ಬಸ್ ನಿಲ್ದಾಣವನ್ನು ಹೇಗೆ ತಲುಪಿ ಬಿಆರ್‌ಟಿಎಸ್ ಬಸ್ಸುಗಳನ್ನು ಬಳಸಿಕೊಂಡು ಪ್ರಯಾಣಿಸಬೇಕು.
- ಜೀಬ್ರಾ ಕ್ರಾಸಿಂಗ್ ಮತ್ತು ಸಿಗ್ನಲ್‌ಗಳ ಕಾರ್ಯಾವೈಕರಿಗಳು ಮತ್ತು ಸಿಗ್ನಲ್‌ಗಳ ಜಂಕ್ಷನ್‌ಗಳ ಅಳವಡಿಸಿರುವ ಕ್ಯೂಟ್ ಯಂತ್ರದ ಕಾರ್ಯವೈಖರಿ
- ಸಾರ್ವಜನಿಕರ ಮತ್ತು ಪ್ರಯಾಣಿಕರ ಹಾಗೂ ಬಿಆರ್‌ಟಿಎಸ್ ಸಿಬ್ಬಂದಿಗಳ ಸದಾಭಿಪ್ರಾಯ.

## ಅನುಬಂಧ–03

## (Overall content of HDBRTS)

### ಹುಬ್ಬಳ್ಳಿ–ಧಾರವಾಡ ತ್ವರಿತ ಬಸ್ ಸಾರಿಗೆ ವ್ಯವಸ್ಥೆ(ಹೆಚ್‌ಡಿಬಿಆರ್‌ಟಿಎಸ್)

ಹುಬ್ಬಳ್ಳಿ– ಧಾರವಾಡ ಅವಳಿ ನಗರದ ಮಧ್ಯದಲ್ಲಿ ವ್ಯವಸ್ಥಿತ ಸಾರಿಗೆಯನ್ನು ಕಲ್ಪಿಸುವದಕ್ಕಾಗಿ ಕೈಗೆತ್ತಿಕೊಳ್ಳಲಾಗಿರುವ ಒಂದು ಯೋಜನೆಯೇ "ಹುಬ್ಬಳ್ಳಿ ï ಧಾರವಾಡ ತ್ವರಿತ ಬಸ್ ಸಾರಿಗೆ ವ್ಯವಸ್ಥೆ " (Hubli Dharwad Bus Rapid Transit system (HDBRTS) ಇದು ದೇಶದಲ್ಲಿಯೇ ವಿಶಿಷ್ಟವಾಗಿರುವ ಯೋಜನೆಯಾಗಿದೆ. ಇದು ಕರ್ನಾಟಕ ರಾಜ್ಯದಲ್ಲಿಯೇ ಮೊಟ್ಟ ಮೊದಲ ಬಾರಿಗೆ ಅನುಷ್ಠಾನಗೊಂಡಿರುವ ಈ ಮಹತ್ವಾಕಾಂಕ್ಷಿ ಯೋಜನೆಯಾಗಿದೆ. ಇದರಿಂದ ಸಾರ್ವಜನಿಕ ಬಸ್ ಪ್ರಯಾಣಿಕರಿಗೆ ತ್ವರಿತ ಹಾಗೂ ಸುರಕ್ಷಿತ ಸಂಚಾರ ಸೌಲಭ್ಯ ದೊರೆಯಲಿದೆ.

**ಉದ್ದೇಶ:** ಶೀಘ್ರ ಸುರಕ್ಷಿತ , ಸುಖಕರ ಹಾಗೂ ಕೈಗೆಟುಕುವ ದರದಲ್ಲಿ ಹೆಚ್ಚು ಪ್ರಯಾಣಿಕರನ್ನು ನಿರ್ದಿಷ್ಟ ಸಮಯದಲ್ಲಿ ನಿಗದಿತ ಸ್ಥಳಕ್ಕೆ ತಲುಪಿಸುವ ಪ್ರಮುಖ ಉದ್ದೇಶ ಈ ಯೋಜನೆಯದಾಗಿದೆ. ಒಂದು ರೀತಿಯಲ್ಲಿ ಇದನ್ನು ರಸ್ತೆ ಮೇಲೆ ಚಲಿಸುವ ಮೆಟ್ರೋ ವಿಧಾನ ಎನ್ನಬಹುದು ಈ ಯೋಜನೆಯಲ್ಲಿ ಬಿಆರ್‌ಟಿಎಸ್ ಬಸ್‌ಗಳ ಸಂಚಾರಕ್ಕಾಗಿಯೇ ಮೀಸಲಿಟ್ಟ ರಸ್ತೆಗಳನ್ನು ಹಾಗೂ ಉಳಿದ ವಾಹನಗಳಿಗಾಗಿ ಅದರ ಪಕ್ಕದಲ್ಲಿಯೇ ಮಿಶ್ರಪಥದ ರಸ್ತೆಗಳನ್ನು ನಿರ್ಮಿಸಲಾಗಿದೆ.

**ಕಾರ್ಯತಂತ್ರ:** ಈ ಯೋಜನೆಗಾಗಿ ಕರ್ನಾಟಕ ಹೆದ್ದಾರಿ ಕಾಯ್ದೆ 1964ರಡಿ ಒಟ್ಟು 72.29 ಎಕರೆ ಭೂಮಿಯಯನ್ನು ಸ್ವಾಧೀನ ಪಡಿಸಿಕೊಂಡು ಹುಬ್ಬಳ್ಳಿ ಹೊಸೂರು ವೃತ್ತದಿಂದ ನವೀನ್ ಹೊಟೇಲ್‌ವರೆಗೆ 35 ಮೀಟರ್ ರಸ್ತೆಯ 7 ಪಥಗಳು ನವೀನ್ ಹೋಟೇಲ್‌ದಿಂದ ಗಾಂಧಿನಗರ ಧಾರವಾಡದವರೆಗೆ 44 ಮೀಟರ್ ರಸ್ತೆಯ 8 ಪಥಗಳು ಗಾಂಧಿನಗರ ಧಾರವಾಡದಿಂದ ಜುಬ್ಲಿ ವೃತ್ತ ಧಾರವಾಡದವರೆಗೆ 35 ಮೀಟರ್ ರಸ್ತೆಯ 7 ಪಥಗಳನ್ನು ರಸ್ತೆಯನ್ನು ನಿರ್ಮಿಸಲಾಗಿದೆ. ಹಾಗೂ ಈ ರಸ್ತೆಗಳ ಉದ್ದಕ್ಕೂ 3 ಮೀಟರ್ ಪುಟ್‌ಪಾತಗಳನ್ನು ರಚಿಸಿ ಅದರ ಪಕ್ಕದಲ್ಲಿಯೇ ವಿದ್ಯುತ್ ಕಂಬಗಳನ್ನು ನೆಟ್ಟು ವಿದ್ಯುತ್‌ನ ವ್ಯವಸ್ಥೆಯನ್ನು ಮಾಡಲಾಗುವುದು, ಅತ್ಯುನ್ನತ ತಂತ್ರಜ್ಞಾನಗಳನ್ನು ಒಳಗೊಂಡ ಒಟ್ಟು 32 ಬಿಆರ್‌ಟಿಎಸ್ ಬಸ್ ನಿಲ್ದಾಣಗಳನ್ನು ನಿರ್ಮಿಸಲಾಗಿದೆ.

**ಬಿಆರ್‌ಟಿಎಸ್‌ನ ಮೂಲಸೌಕರ್ಯಗಳು** : ಬಿಆರ್‌ಟಿಎಸ್ ಬಸ್‌ಗಳಿಗಾಗಿಯೇ

- ಹುಬ್ಬಳ್ಳಿಯ ಹೊಸ ಬಸ್ ನಿಲ್ದಾಣದ ಪಕ್ಕದಲ್ಲಿ ಒಂದು ಡಿಪೋ,
- ಹುಬ್ಬಳ್ಳಿಯ ಗೋಕುಲ ರಸ್ತೆಯ ವಾ.ಕ.ರ.ಸಾ.ಸಂಸ್ಥೆಯ ಡಿಪೋ ಹಿಂದುಗಡೆ ನಿರ್ಮಿಸಿರುವ ವಿಭಾಗೀಯ ಕಾರ್ಯಗಾರ,
- ಹೊಸೂರಿನಲ್ಲಿ ನಿರ್ಮಿಸಿರುವ ಟರ್ಮಿನಲ್

- ಹುಬ್ಬಳ್ಳಿ ರೈಲ್ವೆ ನಿಲ್ದಾಣದಿಂದ ಧಾರವಾಡದ ಜುಬ್ಲಿ ವೃತ್ತದವರೆಗೆ ಒಟ್ಟು 32 ಬಸ್ ನಿಲ್ದಾಣಗಳು
- ಧಾರವಾಡದ ಹೊಸ ಬಸ್ ನಿಲ್ದಾಣದ ಪಕ್ಕದಲ್ಲಿ ನಿರ್ಮಿಸಿರುವ ಡಿಪೋ
- ಧಾರವಾಡದ ಹಳೇ ಬಸ್ ನಿಲ್ದಾಣದ ಪಕ್ಕದಲ್ಲಿ ನಿರ್ಮಿಸಿರುವ ಬಿಆರ್‌ಟಿಎಸ್ ಬಸ್ ಟರ್ಮಿನಲ್
- ನವನಗರ, ಉಣಕಲ್ ಕ್ರಾಸ್, ಹಾಗೂ ಉಣಕಲ್ ಈ ಮೂರು ಸ್ಥಳಗಳಲ್ಲಿ ಬಿಆರ್‌ಟಿಎಸ್ ಬಸ್‌ಗಳಿಗಾಗಿ ಒಟ್ಟು 3 ಮೇಲ್ ಸೇತುವೆಗಳು (ಫ್ಲೈ ಓವರ್) ನಿರ್ಮಿಸಲಾಗಿದೆ.
- ಹೊಸೂರು ಬಸ್ ನಿಲ್ದಾಣಕ್ಕೆ ಹೊಂದಿಕೊಂಡು ನಿರ್ಮಿಸಿರುವ ಪಾದಚಾರಿ ಮೇಲ್ ಸೇತುವೆ
- ಪ್ರೇರಣಾ ಕಾಲೇಜ್ ಬಸ್ ನಿಲ್ದಾಣಕ್ಕೆ ಹೊಂದಿಕೊಂಡ ನಿರ್ಮಿಸಿರುವ ಪಾದಚಾರಿ ಮೇಲ್ ಸೇತುವೆ
- ಉಣಕಲ್ ಬಸ್ ನಿಲ್ದಾಣಕ್ಕೆ ಹೊಂದಿಕೊಂಡ ನಿರ್ಮಿಸಿರುವ ಪಾದಚಾರಿ ಮೇಲ್ ಸೇತುವೆ
- ನವ ನಗರ ಬಸ್ ನಿಲ್ದಾಣಕ್ಕೆ ಹೊಂದಿಕೊಂಡ ನಿರ್ಮಿಸಿರುವ ಪಾದಚಾರಿ ಮೇಲ್ ಸೇತುವೆ
- ರಾಯಾಪೂರ ಇಸ್ಕಾನ್ ದೇವಸ್ಥಾನಕ್ಕೆ ಹೊಂದಿಕೊಂಡ ನಿರ್ಮಿಸಿರುವ ಪಾದಚಾರಿ ಮೇಲ್ ಸೇತುವೆ
- ಸತ್ತೂರಿನ ಎಸ್‌ಡಿಎಮ್ ವೈದ್ಯಕೀಯ ಕಾಲೇಜ್ ಬಸ್ ನಿಲ್ದಾಣಕ್ಕೆ ಹೊಂದಿಕೊಂಡ ನಿರ್ಮಿಸಿರುವ ಪಾದಚಾರಿ ಮೇಲ್ ಸೇತುವೆ ಹೀಗೆ 6 ಸ್ಥಳಗಳಲ್ಲಿ ಪಾದಾಚಾರಿ ಮೇಲುಸೇತುವೆ (Foot Over Bridge) ನಿರ್ಮಿಸಿ ಪ್ರಯಾಣಿಕರು ಸುಲಭವಾಗಿ ರಸ್ತೆ ದಾಟಲು ಅನುಕೂಲ ಕಲ್ಪಿಸಲಾಗಿದೆ.

**ಬಿಆರ್‌ಟಿಎಸ್ ಬಸ್ಸುಗಳ ವಿವರ**

ಅವಳಿ ನಗರದ ಮಧ್ಯ ಬಿಆರ್‌ಟಿಎಸ್ ಕಾರ್ಯಚರಣೆಗಾಗಿ ಸ್ಟ್ಯಾಂಡರ್ಡ ಮಾದರಿಯ 100 ಬಸ್‌ಗಳು ಹಾಗೂ 30 ಜಂಟಿ ಬಸ್‌ಗಳನ್ನು ಖರೀದಿಸಲಾಗಿದೆ.. ಫೀಡರ್ ಹಾಗೂ ನಗರ ಸಾರಿಗೆ ಕಾರ್ಯಚರಣೆಗಾಗಿ 120 ಬಸ್‌ಗಳನ್ನು ಖರೀದಿಸಲಾಗುತ್ತದೆ.

**ಹಸಿರು ಬಿಆರ್‌ಟಿಎಸ್:**

ಯೋಜನೆಯ ಅನುಷ್ಠಾನದಿಂದಾಗಿ ಪರಿಸರದ ಮೇಲೆ ಉಂಟಾಗುವ ಪರಿಣಾಮಗಳನ್ನು ಕಡಿಮೆಗೊಳಿಸಿ ಪರಿಸರ ಸಮತೋಲನಕ್ಕಾಗಿ “ಹಸಿರು ಬಿಆರ್‌ಟಿಎಸ್” ಎಂಬ ಯೋಜನೆಯನ್ನು ರೂಪಿಸಿ ಇದರಡಿ ಒಟ್ಟು 27,510 ಗಿಡಗಳನ್ನು ನೆಡುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿತ್ತು ಅದರಲ್ಲಿ ಈಗಾಗಲೇ 25,400

ಗಿಡಗಳನ್ನು ನೆಡಲಾಗಿದೆ. ಉಳಿದ 2110 ಗಿಡಗಳನ್ನು ಬಿಆರ್‌ಟಿಎಸ್ ಕಾರೀಡಾರ್ ಉದ್ದಕ್ಕೊ ನೆಡುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.

## ಅತ್ಯಾಧುನಿಕ ಬಸ್ ನಿಲ್ದಾಣಗಳು:

- ಅವಳಿ ನಗರದ 22.25 ಕಿ.ಮಿ ಬಿಆರ್‌ಟಿಎಸ್ ಕಾರಿಡಾರ್‌ನಲ್ಲಿ 32 ಅತ್ಯಾಧುನಿಕ ಮಾದರಿಯ ಬಸ್ ನಿಲ್ದಾಣಗಳನ್ನು ರಸ್ತೆ ಮಧ್ಯದಲ್ಲಿ ನಿರ್ಮಿಸಲಾಗಿದೆ
- ಬಿಆರ್‌ಟಿಎಸ್ ಬಸ್‌ಗಳಿಗಾಗಿಯೇ ಪ್ರತ್ಯೇಕ ಪಥಗಳು. ಇದರಲ್ಲಿ ಸಾರ್ವಜನಿಕ ವಾಹನಗಳು ಸಂಚರಿಸಲಿಕ್ಕೆ ಅವಕಾಶವಿಲ್ಲ.
- ಟಿಕೇಟ್‌ನ್ನು ಬಸ್ ನಿಲ್ದಾಣದಲ್ಲಿಯೇ ಪಡೆದುಕೊಂಡು ಪ್ರಯಾಣಿಸಬೇಕು.
- ಈ ಬಸ್ ನಿಲ್ದಾಣಗಳ ವಿಶೇಷತೆಯೆಂದರೆ ಅನವಶ್ಯಕ ಜನರು ನಿಲ್ದಾಣದಲ್ಲಿ ಪ್ರವೇಶಿಸುವಂತಿಲ್ಲ. ಮುಂಗಡ ಟಿಕೇಟ್ ಪಡೆದವರಿಗೆ ಮಾತ್ರ ನಿಲ್ದಾಣದಲ್ಲಿ ಪ್ರವೇಶಾವಕಾಶವಿದೆ.
- ಬಸ್ ನಿಲ್ದಾಣಗಳಲ್ಲಿ ಬಸ್‌ಗಳ ಆಗಮನ/ನಿರ್ಗಮನ ಮಾಹಿತಿ ಎಲ್‌ಇಡಿ ಪರದೆಯಲ್ಲಿ ಪ್ರಸಾರವಾಗುತ್ತಿರುತ್ತದೆ. ಇದರಿಂದ ಪ್ರಯಾಣಿಕರಿಗೆ ನಿಖರ ಮಾಹಿತಿ ದೊರೆಯುತ್ತದೆ.
- ಸುರಕ್ಷತೆಗಾಗಿ ಭದ್ರತಾ ಸಿಬ್ಬಂದಿ ನೇಮಿಸಲಾಗುವುದು ಹಾಗೂ ಬಸ್ ನಿಲ್ದಾಣದಲ್ಲಿ ಸಿ.ಸಿ. ಕ್ಯಾಮರಾ ಅಳವಡಿಸಲಾಗುವದು.
- ಪ್ರತಿ ಮೂರು ನಿಮಿಷಕ್ಕೊಂದು ಬಸ್ ಸಂಚರಿಸುವ ವ್ಯವಸ್ಥೆ ಮಾಡಲಾಗಿದೆ ಇದರಿಂದ ಪ್ರಯಾಣಿಕರು ಬಸ್‌ಗಾಗಿ ಬಹು ಹೊತ್ತು ಕಾಯಬೇಕಾಗಿಲ್ಲ.
- ರಸ್ತೆ ಮಧ್ಯದಲ್ಲಿ ಬಸ್ ನಿಲ್ದಾಣಗಳು ನಿರ್ಮಾಣವಾಗುವದರಿಂದ ಪ್ರಯಾಣಿಕರು ಎರಡೂ ಬದಿಗಳಲ್ಲಿ ಸುಗಮವಾಗಿ ಸಂಚರಿಸಬಹುದು
- ಬಸ್ ಎತ್ತರಕ್ಕೆ ನಿಲ್ದಾಣದ ಎತ್ತರವೂ ಸಮತಟ್ಟಾಗಿರುವದರಿಂದ ಸರಾಗವಾಗಿ ಬಸ್ ಒಳಗೆ ಸಾರ್ವಜನಿಕರು ಹೋಗಬಹುದು ಮತ್ತು ವ್ಹಿಲ್ ಖುರ್ಚಿಗಳಲ್ಲಿ ವೃದ್ಧರು ಮತ್ತು ಅಂಗವಿಕರು ಕುಳಿತುಕೊಂಡು ಬಸ್‌ಗಳಲ್ಲಿ ಸರಗವಾಗಿ ಪ್ರಯಾಣಿಸಬಹುದು.
- ಬಸ್ ನಿಲ್ದಾಣಗಳಲ್ಲಿ ಪ್ರಯಾಣಿಕ ಎಲ್ಲಿದ್ದಾರೆ ಎಂಬ ಮಾಹಿತಿಗಾಗಿ ನೀವು ಇಲ್ಲಿದ್ದೀರಿ ಎಂಬ ಮಾಹಿತಿಯ ಮೇಪ್‌ನ್ನು ಅಂಟಿಸಲಾಗಿದೆ.
- ಬಸ್ ನಿಲ್ದಾಣದ ರ್‍ಯಾಂಪ್‌ನಿಂದ ಅಂದರಿಗೆ ಸಹಾಯವಾಗಲೆಂದು ಟೆಕ್‌ಟೈಲ್ ಎಂಬ ಟೈಲ್ಸನ್ನು ಹೊಂದಿಸಲಾಗಿದೆ. ಇದರಿಂದಾಗಿ ಅಂದರು ಯಾರ ಸಹಾಯವಿಲ್ಲದೆ ಬಸ್ ನಿಲ್ದಾಣಕ್ಕೆ ಆಗಮಿಸಬಹುದು.
- ಬಸ್ ನಿಲ್ದಾಣಗಳಲ್ಲಿ ಪ್ರಯಾಣಿಕರಿಗೆ ಸಂಬಂಧಿಸಿದ ಸೂಚನೆಗಳನ್ನು ಮತ್ತು ಎಚ್ಚರಿಕೆಯ ಸೂಚನೆಗಳನ್ನು ಅಳವಡಿಸಲಾಗಿದೆ.

## ಪಾದಚಾರಿ ಮೇಲ್‌ಸೇತುವೆಗಳು(Footover Bridge)

- ಪಾದಚಾರಿ ಮೇಲ್‌ಸೇತುವೆಗಳನ್ನು 6 ಸ್ಥಳಗಳಲ್ಲಿ (Footover Bridge) ನಿರ್ಮಿಸಿ ಪ್ರಯಾಣಿಕರು ಸುಲಭವಾಗಿ ರಸ್ತೆ ದಾಟಲು ಅನುಕೂಲ ಮಾಡಿಕೊಡಲಾಗಿದೆ.
- ಈ ಪ್ಲೈ ಓವರ್‌ಗಳಲ್ಲಿ ಮೆಟ್ಟಿಲು ಬದಲಾಗಿ ರ್‍ಯಾಂಪ್ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ ಇದರಿಂದ ಪ್ರಯಾಣಿಕರು ಲಗೇಜ್ ಸಮೇತವಾಗಿ ಸರಗವಾಗಿ ಸಾಗಬಹುದಾಗಿದೆ.
- ಅಂಧ ವ್ಯಕ್ತಿಗಳಿಗಾಗಿ ರ್‍ಯಾಂಪ್‌ನಲ್ಲಿ ಟೆಕ್ ಟೈಲ್ ಎಂಬ ವಿಶೇಷ ಟೈಲ್ಸ್ ಅಳವಡಿಸಲಾಗುತ್ತಿದ್ದು ಇದರಿಂದಾಗಿ ಮತ್ತೊಬ್ಬರ ನೆರವಿಲ್ಲದೇ ನಿಲ್ದಾಣ ಪ್ರವೇಶಿಸಿ ಬಸ್ ಒಳಗೆ ಹೋಗಬಹುದು.
- ವೃದ್ಧರಿಗೆ, ಅಸಹಾಯಕರಿಗಾಗಿ ಅನುಕೂಲಕ್ಕಾಗಿ ಲಿಫ್ಟ್‌ಗಳನ್ನು ಸಹ ಈ ಪ್ಲೈ ಓವರ್‌ಗಳಲ್ಲಿ ಅಳವಡಿಸಲಾಗಿದೆ.

## ಜೀಬ್ರಾ ಗುರುತಿನ ಮಾರ್ಗ.

- ಬಸ್ ನಿಲ್ದಾಣಕ್ಕೆ ಹೋಗುವ ಪ್ರಯಾಣಿಕರು ಹತ್ತಿರ ವಿರುವ ಸೂಚನೆ(ಸಿಗ್ನಲ್)ಗಳನ್ನು ನೋಡಿಕೊಂಡು ಜೀಬ್ರಾ ಗುರುತಿನ ಮಾರ್ಗದ ಮೂಲಕ ಮಿಶ್ರಪಥ ರಸ್ತೆಯನ್ನು ದಾಟಿ ಬಸ್ ನಿಲ್ದಾಣಕ್ಕೆ ಆಗಮಿಸಬೇಕು.
- ಬಿಆರ್‌ಟಿಎಸ್ ಬಸ್ ನಿಲ್ದಾಣದಿಂದ ಬರುವ ಪ್ರಯಾಣಿಕರು ಹತ್ತಿರ ವಿರುವ ಸೂಚನೆ(ಸಿಗ್ನಲ್)ಗಳನ್ನು ನೋಡಿಕೊಂಡು ಜೀಬ್ರಾ ಗುರುತಿನ ಮಾರ್ಗದ ಮೂಲಕ ಎಡಕ್ಕೆ ಅಥವಾ ಬಲಕ್ಕೆ ಮಿಶ್ರಪಥ ರಸ್ತೆಯನ್ನು ದಾಟಿ ಪಾದಚಾರಿ ಮಾರ್ಗ(Footpath)ಗೆ ಆಗಮಿಸಬೇಕು.

## ಮೇಲ್ ಸೇತುವೆಗಳು (bridges)

- ಜನಸಾಂದ್ರತೆ ಅಧಿಕವಾಗಿರುವ ನವನಗರ, ಉಣಕಲ್ ಕ್ರಾಸ್, ಹಾಗೂ ಉಣಕಲ್ ಈ ಮೂರು ಸ್ಥಳಗಳಲ್ಲಿ ಪ್ಲೈ ಓವರ್ ನಿರ್ಮಿಲಾಗಿದೆ.
- ಇದರಿಂದ ಜನ ಸಾಂದ್ರತೆ ಇರುವ ಕಡೆ ಬಿಆರ್‌ಟಿಎಸ್ ಬಸ್‌ಗಳು ಯಾವುದೇ ಅಡೆತಡೆ ಇಲ್ಲದೆ ಸರಾಗವಾಗಿ ಚಲಿಸಬಹುದು.
- ಮೇಲ್ ಸೇತುವೆಗಳಿಗೆ ವಿದ್ಯುತ್ ದೀಪದ ಅಲಂಕಾರ ಮಾಡಲಾಗಿದೆ.

## ಹೆಚ್‌ಡಿಬಿಆರ್‌ಟಿಎಸ್ ಬಸ್ಸುಗಳು

- ಅತ್ಯಾದುನಿಕ ವಿಶ್ವದರ್ಜೆಯ ತಂತ್ರಜ್ಞಾನ ಸೌಲಭ್ಯಗಳನ್ನು ಹೊಂದಿರುವ ಬಿಆರ್‌ಟಿಎಸ್ ಕಾರಿಡಾರ್‌ಗಾಗಿಯೇ ಒಟ್ಟು 130 ಬಸ್ಸುಗಳನ್ನು ಖರೀದಿಸಿದೆ.
- ಅದರಲ್ಲಿ 12 ಮೀಟರ್ ಉದ್ದದ 100 ಓಲ್ವೋ ಬಸ್ಸುಗಳು
- 18 ಮೀಟರ್ ಉದ್ದದ 30 ಆರ್ಟಿಕ್ಯೂಲೇಟೆಡ್ ಬಸ್ಸುಗಳು.
- ಎಲ್ಲಾ ಬಸ್ಸುಗಳು ಹವಾ ನಿಯಂತ್ರಿತ ಬಸ್ಸುಗಳಾಗಿವೆ.

- 130 ಬಸ್ಸುಗಳಿಗೆ ಜಿ.ಪಿಎಸ್‌ನ್ನು ಅಳವಡಿಸಲಾಗಿದೆ.
- ನಿಯಂತ್ರಣಾ ಕೊಠಡಿಯಿಂದಲೇ ಇವುಗಳ ಬಸ್ಸುಗಳ ಮೇಲ್ವಿಚಾರಣೆ ನಡೆಸಲಾಗುವುದು
- ಈ ವ್ಯವಸ್ಥೆಯ ಮೂಲಕ ಬಸ್ಸು ಎಲ್ಲಿದೆ, ಎಷ್ಟು ವೇಗವಾಗಿ ಚಲಿಸುತ್ತದೆ, ಯಾವ ಬಸ್ ನಿಲ್ದಾಣದಲ್ಲಿ ಬಸ್ಸುಗಳನ್ನು ನಿಲ್ಲಿಸಲಿಲ್ಲ. ಈ ಎಲ್ಲಾ ಸಮಗ್ರ ಮಾಹಿತಿಯು ತಿಳಿಯುವುದು.
- ಒಂದು ವೇಳೆ ಬಸ್ ಚಾಲಕ ನಗದಿತ ವೇಗಕ್ಕಿಂತ ಬಸ್‌ನ ವೇಗವನ್ನು ಹೆಚ್ಚಿಸಿದರೆ ನಿಯಂತ್ರಣಾ ಕೊಠಡಿಯಿಂದ ಎಚ್ಚರಿಕೆ ಸಂದೇಶವು ಚಾಲಕನಿಗೆ ರವಾನೆಯಾಗುವುದು.
- ಬಸ್ಸುಗಳ ವಿಶೇಷ ಗುಣವೆಂದರೆ ಸಾಮಾನ್ಯ ಬಸ್ಸುಗಳು 90–100 ಡಿಸೇಬಲ್ ಶಬ್ದಗಳನ್ನು ಹೊರಹಾಕಿದರೆ ಬಿಆರ್‌ಟಿಎಸ್ ಬಸ್ಸುಗಳು ಕೇವಲ 70 ಡಿಸೇಬಲ್ ಶಬ್ದವನ್ನು ಹೊರ ಹಾಕುವುದು.

## ಚತುರ ನಗರ ಸಾರಿಗೆ (ಇಂಟೆಲಿಜಂಟ್ ಟ್ರಾನ್ಸ್‌ಪೋರ್ಟ್ ಸಿಸ್ಟಂ)

- ಹುಬ್ಬಳ್ಳಿ–ಧಾರವಾಡ ಸಾರ್ವಜನಿಕರ ಪ್ರಯತ್ನ ಮತ್ತು ಸಹಕಾರದಿಂದ ದಕ್ಷಿಣ ಭಾರತದಲ್ಲಿಯೇ ಅತ್ಯಂತ ಯಶಸ್ವಿ ಬಿಆರ್‌ಟಿಎಸ್ ಯೋಜನೆಯಾಗುವುದರಲ್ಲಿ ಯಾವುದೇ ಸಂದೇಹವಿಲ್ಲ ಏಕೆಂದರೆ ಇಲ್ಲಿ ಕೇವಲ ಕಾರಿಡಾರ್ ಅಭಿವೃದ್ದಿ, ಪುಟ್‌ಪಾತಗಳು, ಬಸ್‌ನಿಲ್ದಾಣ, ಡಿಪೋ, ವರ್ಕಶಾಪ್, ಇಂಟರ್ ಚೇಂಜ್ ನಿರ್ಮಾಣ, ಹವಾನಿಯಂತ್ರಿತ ಬಸ್‌ಗಳ ಓಡಾಟವಷ್ಟೇ ಬಿಆರ್‌ಟಿಎಸ್ ಗುರಿಯಾಗಿರುವುದಿಲ್ಲ ಇದರ ಜೊತೆಗೆ ಚತುರ ನಗರ ಸಾರಿಗೆ ವ್ಯವಸ್ಥೆಗೆ ಸಂಬಂಧಿಸಿದ ಹಲವಾರು ಕೆಲಸ ಕಾರ್ಯಗಳನ್ನು ನಿರ್ವಹಿಸುವುದು ಅವುಗಳು ಈ ಕೆಳಗಿನಂತಿವೆ
- ಬಸ್‌ಗಳ ವೇಳಪಟ್ಟಿಯ ಬಗ್ಗೆ ಬಸ್ ನಿಲ್ದಾಣ ಹಾಗೂ ಬಸ್‌ಗಳಲ್ಲಿ ಎಲೆಕ್ಟ್ರನಿಕ್ ಪರದೆಯ ಮೇಲೆ ಪ್ರದರ್ಶಿಸುವುದು.
- ಪ್ರಯಾಣಿಕರು ತಾವಿರುವ ಸ್ಥಳದಿಂದಲೇ ಬಸ್‌ಗಳ ವೇಳಾಪಟ್ಟಿಯನ್ನು ಎಸ್.ಎಮ್.ಎಸ್ ಮೂಲಕ ಸಹ ಪಡೆಯುವ ವ್ಯವಸ್ಥೆ ಕಲ್ಪಿಸಲಾಗುವುದು.
- ಜಂಕ್ಷನ್‌ಗಳಲ್ಲಿ ಬಿಆರ್‌ಟಿಎಸ್ ಬಸ್‌ಗಳಿಗೆ ಆದ್ಯತೆ ನೀಡುವುದರ ಜೊತೆಗೆ ಸಿಗ್ನಲ್‌ಗಳ ಮೂಲಕ ಪಾದಚಾರಿಗಳಿಗೆ ಸುಗಮವಾಗಿ ರಸ್ತೆ ದಾಟುವ ವ್ಯವಸ್ಥೆ ಕಲ್ಪಿಸುವುದು.
- ಬಸ್‌ನಿಲ್ದಾಣದ ಹೆಸರು, ಬಸ್‌ದರ ಮುಂತಾದ ಮಾಹಿತಿಯನ್ನು ಬಸ್‌ನಿಲ್ದಾಣ ಹಾಗೂ ಬಸ್‌ಗಳಲ್ಲಿ ಪ್ರದರ್ಶಿಸುವುದು
- ಕಂಪನಿಯ ಇನ್ನಿತರೇ ಸೌಲಭ್ಯಗಳ ಬಗ್ಗೆ ಪ್ರಯಾಣಿಕರಿಗೆ ಬಸ್‌ನಿಲ್ದಾಣಗಳಲ್ಲಿ ಮಾಹಿತಿ ನೀಡುವುದು.
- ಈ ಮೇಲಿನ ಉದ್ದೇಶಗಳನ್ನಟ್ಟುಕೊಂಡು ಐಟಿಎಸ್(ಚತುರ ಸಾರಿಗೆ ವ್ಯವಸ್ಥೆ) ವ್ಯವಸ್ಥೆಯನ್ನು ಬಿಆರ್‌ಟಿಎಸ್ ಯೋಜನೆಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಎಲ್ಲಾ ವ್ಯವಸ್ಥೆಯನ್ನು ಮೇಲ್ವಿಚಾರಣೆ ಮಾಡಲು ಕಂಟ್ರೋಲ್ ರೂಂನ್ನು ಸ್ಥಾಪಿಸಲಾಗಿದೆ. ಈ ಕಂಟ್ರೊಲ್ ರೂಂ ಪ್ರಯಾಣಿಕರ ಸುರಕ್ಷತೆ ದಕ್ಷತೆ, ಸೇವೆಗಳು ಹಾಗೂ ಸಂಚಾರಿ ಪರಿಸ್ಥಿತಿಯನ್ನು ತತ್‌ಕ್ಷಣದ ಮಾಹಿತಿಯನ್ನು ಪಡೆಯುತ್ತದೆ ಇದನ್ನು ಹೊಸೂರು ಇಂಟರ್‌ಚೇಂಜ್‌ನ 3ನೇ ಮಹಡಿ ಕಟ್ಟಡದಲ್ಲಿ ನಿರ್ಮಿಸಲಾಗಿದೆ. ಜೊತೆಗೆ ಈ ಕೆಳಗಿನ ಉಪ ವ್ಯವಸ್ಥೆಗಳನ್ನು ಸಹ ಒದಗಿಸುವ ಉದ್ದೇಶವನ್ನು ಇಟ್ಟುಕೊಂಡಿದೆ.
- ಐಟಿಎಸ್‌ನ ಮತ್ತೊಂದು ವಿಶೇಷತೆವೆಂದರೆ ವಾಹನ ಶೋಧ ವ್ಯವಸ್ಥೆ(ವೆಹಿಕಲ್ ಟ್ರ್ಯಾಕಿಂಗ್ ಸಿಸ್ಟಮ್) ಮೂಲಕ ಬಿಆರ್‌ಟಿಎಸ್‌ನ ಎಲ್ಲಾ ಬಸ್ಸುಗಳಿಗೂ ಜಿಪಿಎಸ್ ಅಳವಡಿಸಿ ನಿಯಂತ್ರಣಾ ಕೊಠಡಿಯಿಂದ ಮೇಲ್ವಿಚಾರಣೆ ನೆಡಸಲಾಗುತ್ತಿದೆ.

- ಈ ವ್ಯವಸ್ಥೆಯ ಮೂಲಕ ಬಸ್ ಎಲ್ಲಿದೆ, ಎಷ್ಟು ವೇಗವಾಗಿ ಹೋಗುತ್ತದೆ, ಎಷ್ಟು ಸಮಯಕ್ಕೆ ಮುಂದಿನ ನಿಲ್ದಾಣ ತಲುಪಲಿದೆ, ಯಾವ ನಿಲ್ದಾಣದಲ್ಲಿ ನಿಲ್ಲಿಸಿಲ್ಲ ಎಂಬ ಸಮಗ್ರ ಚಿತ್ರಣ ಸಿಗುತ್ತದೆ.
- ಒಂದು ಬಸ್ಸಿನಿಂದ ಇನ್ನೊಂದು ಬಸ್ಸಿಗೆ ಓವರ್ ಟ್ಯೇಕ್ ಮಾಡುವಾಗ ವೇಗ ಹೆಚ್ಚಾದಾಗ ಚಾಲಕನಿಗೆ ಎಚ್ಚರಿಕೆಯನ್ನೂ ನೀಡುತ್ತದೆ.
- ಪ್ರಯಾಣಿಕರು ಬಸ್ಸು ಎಷ್ಟು ಹೊತ್ತಿಗೆ ತಾವು ಕಾಯುತ್ತಿರುವ ಬಸ್ ನಿಲ್ದಾಣಕ್ಕೆ ತಲುಪಬಹುದು ಎಂಬುವುದನ್ನು ತಮ್ಮ ಮೊಬೈಲ್ ಮೂಲಕ ತಿಳಿದುಕೊಳ್ಳಬಹುದು ಇದಕ್ಕೆ ಯಾಪ್ ಕೊಡ ಅಭಿವೃದ್ದಿ ಪಡಿಸಲಾಗಿದೆ.
- ಬಿಆರ್‌ಟಿಎಸ್ ಬಸ್ ನಿಲ್ದಾಣಗಳಲ್ಲಿ ಮುಂಚಿತವಾಗಿಯೇ ಬಸ್ ಟಿಕೇಟ್‌ನ್ನು ಖರೀದಿಸುವ ಅಥವಾ ಸ್ಮಾರ್ಟ ಕಾರ್ಡ ಬಳಸಿ ಪ್ರಯಾಣಿಸುವ ವ್ಯವಸ್ಥೆ ಕಲ್ಪಿಸುವುದು.
- ಎಲ್ಲಾ ಬಿಆರ್‌ಟಿಎಸ್ ಬಸ್‌ಗಳಲ್ಲಿ ಮುಂದಿನ ಬಸ್ ನಿಲ್ದಾಣದ ಬಗ್ಗೆ ಸ್ವಯಂಚಾಲಿತ ಎಲೆಕ್ಟ್ರಾನಿಕ್ ಫಲಕಗಳ ಮೂಲಕ ಮಾಹಿತಿ ನೀಡುವ ವ್ಯವಸ್ಥೆ ಮಾಡುವುದು. ಎಲ್ಲಾ ಬಸ್ ನಿಲ್ದಾಣಗಳನ್ನು ನಿಯಂತ್ರಣ ಕೊಠಡಿಯೊಂದಿಗೆ ಸಂಪರ್ಕ ಕಲ್ಪಿಸಲಾಗಿದೆ.
- ಬಸ್‌ಗಳ ಕಾರ್ಯಚರಣೆ, ನಿಲ್ದಾಣ, ಡಿಪೋ ವರ್ಕಶಾಪ್‌ಗಳಲ್ಲಿ,ಹಾಗೂ ಇಂಟರ್‌ಚೇಂಜ್‌ಗಳಲ್ಲಿ ದೈನಂದಿನ ಕಾರ್ಯಾಚರಣೆ ವರದಿಯನ್ನು ತಯಾರಿಸುವುದು, ಮತ್ತು ಟ್ರಂಕ್ ಹಾಗೂ ಫೀಡರ್‌ಗಳ ಸೇವೆಯನ್ನು ಸಮನ್ವಯಗೊಳಿಸುವುದು. ಈ ಎಲ್ಲಾ ವಿಷಯಗಳ ಮಾಹಿತಿಯನ್ನು ಕಂಟ್ರೋಲ್ ರೂಂನಲ್ಲಿಯೇ ಮಾಹಿತಿಯನ್ನು ಪಡೆಯಬಹುದು.
- ಡಿಪೋ, ಕಾರ್ಯಾಗಾರ, ಟರ್ಮಿನಲ್ ಮತ್ತು ವಿಭಾಗೀಯ ಕಛೇರಿಗಳ ನಿರ್ವಹಣೆ, ಬಸ್‌ಗಳ ಕಾರ್ಯಾಚರಣೆ ಮತ್ತು ಬಸ್‌ಶೆಡ್ಯೂಲ್ ಹಾಗೂ ಸಿಬ್ಬಂದಿ ನಿರ್ವಹಣೆ, ದಾಸ್ತಾನು ನಿರ್ವಹಣಾ ವ್ಯವಸ್ಥೆ, ಮಾನವ ಸಂಪನ್ಮೂಲ ಅಭಿವೃದ್ದಿ ವ್ಯವಸ್ಥೆ, ಲೆಕ್ಕಪತ್ರ ಶಾಖೆಯನ್ನು ನಿರ್ವಹಿಸಲು ಹಾಗೂ ಇನ್ನತರೇ ಆಡಳಿತಾತ್ಮಕ ಕಾರ್ಯ ನಿರ್ವಹಣೆಯಲ್ಲಿ ಐಟಿಎಸ್ ಸಹಕಾರಿಯಾಗುವುದು.
- ಬಿಆರ್‌ಟಿಎಸ್ ಬಸ್‌ನಿಲ್ದಾಣ ಮತ್ತು ಬಸ್‌ಗಳಲ್ಲಿ ಸ್ವಯಂಚಾಲಿತ ಸರಿಯುವ ಬಾಗಿಲುಗಳನ್ನು (ಅಟೋಮ್ಯಾಟಿಕ್ ಸ್ಲೈಡಿಂಗ್ ಡೋರ್) ನಿರ್ವಹಿಸುವುದು.
- ಯೋಜನೆಯ ಕಾರಿಡಾರ್ ಬಿಆರ್‌ಟಿಎಸ್ ನಿಲ್ದಾಣ, ಟರ್ಮಿನಲ್ ಡಿಪೋ ಹಾಗೂ ಬಸ್‌ಗಳಲ್ಲಿ ಸಂವಹನ ಜಾಲವನ್ನು ನಿರ್ವಹಿಸುವುದು.
- ಬಸ್‌ಗಳಲ್ಲಿ ಮತ್ತು ಬಿಆರ್‌ಟಿಎಸ್ ಬಸ್ ನಿಲ್ದಾಣಗಳಲ್ಲಿ ಸಿ.ಸಿ ಕ್ಯಾಮರಾ ಅಳವಡಿಸಿ ಅವುಗಳನ್ನು ನಿರ್ವಹಿಸುವುದು.
- ಯೋಜನೆಯ ಕಾರಿಡಾರ್,ಟರ್ಮಿನಲ್ ಮತ್ತು ಸಿಟಿ ಮೊಬಿಲಿಟಿ ಸೆಂಟರ್‌ಗಳಲ್ಲಿ ಇನ್ಸಿಡೆಂಟ ಮ್ಯಾನೇಜಮೆಂಟ ಸಿಸ್ಟಮ್ ಮೂಲಕ ಬಸ್ ಪ್ರಯಾಣದಲ್ಲಿ ಯಾವುದೇ ಅನಾನುಕೂಲವಿದ್ದಲ್ಲಿ ಪ್ರಯಾಣಿಕರಿಗೆ ಯಾವುದೇ ತೊಂದರೆಯಾಗದಂತೆ ಮಾರ್ಗ ಬದಲಾವಣೆ ಅಥವಾ ಇನ್ನಿತರೇ ವ್ಯವಸ್ಥೆಯ ಮೂಲಕ ಪ್ರಯಾಣಿಕರನ್ನು ಸೂಕ್ತ ಸ್ಥಳಗಳಿಗೆ ತಲುಪಿಸುವ ಬಗ್ಗೆ ಉಪ ವಿಭಾಗಗಳಿಗೆ ಮಾಹಿತಿ ರವಾನಿಸುವುದು ಹಾಗೂ ಉಪ ವಿಭಾಗ ಕಛೇರಿಯವರು ಸಂಬಂಧ ಪಟ್ಟ ಬಸ್ ಚಾಲಕ ಹಾಗೂ ಮೇಲ್ವಿಚಾರಕರಿಗೆ ತಿಳಿಸುವ ವ್ಯವಸ್ಥೆ ಕಲ್ಪಿಸಲಾಗುವುದು.
- ಈ ಐಟಿಎಸ್ ವ್ಯವಸ್ಥೆಯಿಂದಾಗಿ ಸಂಚಾರ ವ್ಯವಸ್ಥೆ ಸುಧಾರಣೆ ಜೊತೆಗೆ ಕಾರ್ಯಾಚರಣೆ ವೆಚ್ಚ ತಗ್ಗುವುದು, ಚಾಲಕರ ಕಾರ್ಯವೈಖರಿ ಮೇಲೆ ನಿಗಾ ಇಟ್ಟಿರುವುದರಿಂದ ಅಜಾಗರೂಕತೆ ಚಾಲನೆ ಕಡಿಮೆಯಾಗುವುದು. ಹೀಗಾಗಿ ಅಪಘಾತಗಳು ಆಗುವ ಅವಕಾಶಗಳು ಕಡಿಮೆಯಾಗುವುದು ಮತ್ತು ಇಂದನದ ಉಳಿತಾಯವಾಗುತ್ತದೆ.

- ಇಂತಹ ವಿಶೇಷ ಸೌವಲತ್ತುಗಳನ್ನು ಹಾಗೂ ಅತ್ಯಾದುನಿಕ ವ್ಯವಸ್ಥೆಯನ್ನು ಒಳಗೊಂಡಿರುವ ಬಿಆರ್‌ಟಿಎಸ್ ಅವಳಿ ನಗರದ ಸಾರ್ವಜನಿಕ ಸಾರಿಗೆ ವ್ಯವಸ್ಥೆಯಲ್ಲಿ ಒಂದು ಹೊಸ ಸಂಚಲನ ಮೂಡಿಸಲಾಗುವುದು.

## ಸಂಚಾರ ಸೂಚನೆಗಳು(ಸಿಗ್ನಲ್‌ಗಳು)

ಈ ಹೆಚ್‌ಡಿಬಿಆರ್‌ಟಿಎಸ್ ಒಂದು ವಿಶಿಷ್ಟ ಯೋಜನೆಯಾಗಿದ್ದು, ಅದು ತನ್ನದೆ ಆದ ಹಲವಾರು ವೈಶಿಷ್ಟ್ಯತೆಗಳನ್ನು ಹೊಂದಿರುತ್ತದೆ ಅದರಲ್ಲಿ ಸಿಗ್ನಲ್‌ಗಳು ಕೂಡ ಒಂದು ಈ ಸಿಗ್ನಲ್‌ಗಳು ಬಿಆರ್‌ಟಿಎಸ್ ಉದ್ದಕ್ಕೂ ಅಂದರೆ ಹುಬ್ಬಳ್ಳಿ ಸಿಬಿಟಿ ಯಿಂದ ಧಾರವಾಡದ ಜುಬ್ಲಿ ವೃತ್ತದವರೆಗೆ ಒಟ್ಟು 39 ಜಂಕ್ಷನ್‌ಗಳಿಗೆ ಸಿಗ್ನಲ್‌ಗಳು ಬರುವವು, ಪ್ರತಿ ಜಂಕ್ಷನ್‌ಗಳಿಗೆ ಒಟ್ಟು 9 ರಿಂದ 10 ಸಿಗ್ನಲ್ ಕಂಬಗಳುಗಳು ಬರುವವು.

- ಪ್ರತಿ ಜಂಕ್ಷನ್‌ಗಳಲ್ಲಿ 3 ವಿಧದ ಸಿಗ್ನಲ್‌ಗಳನ್ನು ಅಳವಡಿಸಲಾಗಿದೆ. ಅವುಗಳೆಂದರೆ ಪಾದಚಾರಿ ಸಿಗ್ನಲ್‌ಗಳು,ಬಿಆರ್‌ಟಿಎಸ್ ಸಿಗ್ನಲ್‌ಗಳು, ಮತ್ತು ಮಿಶ್ರಪಥ ಸಿಗ್ನಲ್‌ಗಳು ಇವುಗಳು ಬಿಆರ್‌ಟಿಎಸ್ ಮತ್ತು ಮಿಶ್ರ ಪಥ ರಸ್ತೆಗಳಿಗೆ ಹೊಂದಿಕೊಂಡು ಕೆಲಸ ಕಾರ್ಯಗಳನ್ನು ಸ್ವತ: ನಿರ್ವಹಿಸುವವು.
- ಭಾರತದಲ್ಲಿ ಮೊಟ್ಟ ಮೊದಲ ಬಾರಿಗೆ CDAC Urban Traffic Control Equipment (CUTE) ಎಂಬ ಅತ್ಯುನ್ನತವಾದ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಅವಳಿ ನಗರದ ಬಿಆರ್‌ಟಿಎಸ್‌ಗೆ ಅಳವಡಿಸುವುದು ವಿಶಿಷ್ಟವಾಗಿದೆ.
- ಈ ಯಂತ್ರವನ್ನು ಪ್ರತಿ ಜಂಕ್ಷನ್‌ಗಳಿಗೆ ಅಳವಡಿಸಲಾಗುವುದು ಇದರ ವಿಶೇಷತೆ ಎಂದರೆ ಪ್ರಸ್ತುತ ಯಾವ ಕಡೆ ವಾಹನಗಳ ಸಂಚಾರ ದಟ್ಟಣೆಯು ಹೆಚ್ಚಾಗಿರುವುದೊ ಅದನ್ನು state- of -the –art ದ ತಂತ್ರಜ್ಞಾನ ಮತ್ತು ವಿಡೀಯೋದ ಮೂಲಕ ವಿಶ್ಲೇಷಿಸಿ ವಾಹನಗಳ ಸಂಚಾರಕ್ಕೆ ಅವಕಾಶ ಮಾಡಿಕೊಡುವುದು.
- ಪ್ರತಿ ಜಂಕ್ಷನ್‌ಗಳಲ್ಲಿ ಅಳವಡಿಸಿದ ಈ ಯಂತ್ರಗಳು ತರಾಂಗಾಂತರ ಮೂಲಕ ಬಿಆರ್‌ಟಿಎಸ್ ಬಸ್ಸುಗಳು ಮತ್ತು ಮಿಶ್ರಪಥದ ವಾಹನಗಳು ಸಂಚಾರ ಮಾಡುವಾಗ ಯಾವುದೇ ಜಂಕ್ಷನ್‌ನ ಸಿಗ್ನಲ್‌ಗೆ ಒಳಪಟ್ಟು 10–15 ಸೆಕೆಂಡುಗಳ ಕಾಲ ತಡಮಾಡಿದ್ದಲ್ಲಿ ಮುಂದಿನ 2 ರಿಂದ 3 ಜಂಕ್ಷನ್‌ಗಳ ಸಿಗ್ನಲ್‌ಗಳಿಗೆ ಒಳಪಡದ ಹಾಗೆ ವಾಹನಗಳಿಗೆ ಸಂಚಾರ ಮಾಡುವುದಕ್ಕೆ ಅವಕಾಶ ಮಾಡಿಕೊಡುವವು,
- ಇದರಿಂದಾಗಿ ಬಿಆರ್‌ಟಿಎಸ್ ಬಸ್ಸುಗಳಲ್ಲಿ ಮತ್ತು ವಿಶ್ರಪಥಗಳಲ್ಲಿ ಸಂಚರಿಸುವ ಪ್ರಯಾಣಿಕರಿಗೆ ಸುಗಮವಾಗಿ ಮತ್ತು ಸಿಗ್ನಲ್‌ಗಳಲ್ಲಿ ಹೆಚ್ಚಿನ ಸಮಯ ಕಾಲಾವಕಾಶ ನೀಡದೆ ಅತಿ ಶೀಘ್ರ ಮತ್ತು ನಿರ್ದಿಷ್ಟ ಸಮಯದಲ್ಲಿ ನಿಗದಿತ ಸ್ಥಳಕ್ಕೆ ತಲುಪಬಹುದು.
- ಈ ಸಿಗ್ನಲ್‌ಗಳನ್ನು CUTE ನ ಮೂಲಕ ಪಾದಚಾರಿಗಳ ಮತ್ತು ವಾಹನಗಳ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ವಿನ್ಯಾಸಗೊಳಿಸಿದ್ದಾರೆ
- ಅಂದರೆ ಒಂದು ರಸ್ತೆಯಿಂದ ಇನ್ನೊಂದು ರಸ್ತೆಗೆ ವಾಹನಗಳೂ ಸುಗಮವಾಗಿ ಸಾಗಲು ಮತ್ತು ಪ್ರಯಾಣಿಕರು ಎಡ ಮತ್ತು ಬಲ ಬದಿಯಿಂದ ಜೀಬ್ರಾ ಕ್ರಾಸ್‌ನ್ನು ಬಳಸಿಕೊಂಡು ಬಿರ್‌ಟಿಎಸ್ ಬಸ್ ನಿಲ್ದಾಣಕ್ಕೆ ಬರುವಾಗ ಹಾಗೂ ಮಿಶ್ರ ಪಥದ ರಸ್ತೆಗಳಿಗೆ ಹೊಂದಿಕೊಂಡ ಆಯಾ ಊರಿನ ರಸ್ತೆಗಳಲ್ಲಿ ಓಡಾಡುವ ವಾಹನಗಳಿಗೆ ಈ ಸಿಗ್ನಲ್‌ಗಳು ಸಹಾಯ ಮಾಡುವವು ಒಟ್ಟಾರೆ ಈ ಸಿಗ್ನಲ್‌ಗಳು ಜಂಕ್ಷನ್‌ಗಳ ವ್ಯಾಪ್ತಿಯಲ್ಲಿ ಬರುವ ಸಂಚಾರ ದಟ್ಟಣೆಯನ್ನು ನಿಯಂತ್ರಿಸುವವು.

- ಒಂದು ವೇಳೆ ಬಿಆರ್‌ಟಿಎಸ್ ಬಸ್ ಚಾಲಕ ಮತ್ತು ಮಿಶ್ರಪಥದಲ್ಲಿ ಸಂಚರಿಸುವ ವಾಹನಗಳ ಚಾಲಕ ಟ್ರಾಫೀಕ್ ಸಿಗ್ನಲ್‌ನ್ನು ಜಂಪ್ ಮಾಡಿಕೊಂಡು ಬಂದಲ್ಲಿ ಸಂಚಾರ ನಿರ್ವಹಣಾ ಕೇಂದ್ರಕ್ಕೆ ಮಾಹಿತಿ ರವಾನೆಯಾಗುವುದು.
- ಈ ನಿರ್ವಹಣಾ ಕೇಂದ್ರವನ್ನು ಹೊಸೂರಿನ ಟರ್ಮಿನಲ್ಲಿ ಅಳವಡಿಸಲಾಗಿದೆ. ಈ ನಿರ್ವಹಣಾ ಕೇಂದ್ರವು ಹುಬ್ಬಳ್ಳಿಯಿಂದ ಧಾರವಾಡದವರೆಗೆ ಇರುವ ಜಂಕ್ಷನ್‌ಗಳಲ್ಲಿ ಅಳವಡಿಸಿದ ಸಿಗ್ನಲ್‌ಗಳ ಸಂಪೂರ್ಣವಾದ ಕೆಲಸ ಕಾರ್ಯವನ್ನು ನಿರ್ವಹಿಸುವುದು.
- ಕಂಟ್ರೋಲ್ ಸೆಂಟರ್‌ನಲ್ಲಿರುವ ಟ್ರ್ಯಾಮ್(TRAMM) (Traffic monitoring and management system) ಎಂಬ ತಂತ್ರಾಂಶವು ಕ್ಯೂಟ್ ಯಂತ್ರವನ್ನು ನಿಯಂತ್ರಿಸುವುದಲ್ಲದೆ ಸಿಗ್ನಲ್‌ಗಳಲ್ಲಿ ಅಳವಡಿಸಿರುವ ಹಸಿರು ಮತ್ತು ಕೆಂಪು ಸಿಗ್ನಲ್‌ಗಳನ್ನೂ ಸಹ ಕಂಟ್ರೋಲ್ ಸೆಂಟರ್‌ನಿಂದಲೇ ನಿಯಂತ್ರಿಸಬಹುದು

## ಹೈ ಮಾಸ್ಟಗಳು

- ಪ್ರತಿ ಜಂಕ್ಷನ್‌ಗಳಿಗೆ ಹೊಂದಿಕೊಂಡಂತೆ 25 ಮೀಟರ್ ಉದ್ದದ ಒಂದರಿಂದ ಎರಡು ಹೈ ಮಾಸ್ಟಗಳನ್ನು ಅಳವಡಿಸಲಾಗುವುದು
- ಇವುಗಳು ಸುಮಾರು 50 ಮೀಟರ್‌ವರೆಗೆ ಬೆಳಕನ್ನು ಸೂಸುವವು.
- ಹೊಸೂರು ಟರ್ಮಿನಲ್‌ನಲ್ಲಿ 20 ಮೀಟರ ಉದ್ಧದ 10 ಹೈ ಮಾಸ್ಟಗಳನ್ನು ಅಳವಡಿಸಲಾಗಿದೆ.
- ಹುಬ್ಬಳ್ಳಿ ಡಿಪೋದಲ್ಲಿ 25 ಮೀಟರ್ ಉದ್ದದ 4 ಹೈ ಮಾಸ್ಟಗಳನ್ನು ಅಳವಡಿಸಲಾಗಿದೆ.
- ಧಾರವಾಡ ಡಿಪೋದಲ್ಲಿ 25 ಮೀಟರ್ ಉದ್ದದ 2 ಹೈ ಮಾಸ್ಟಗಳನ್ನು ಅಳವಡಿಸಲಾಗಿದೆ.
- ಹುಬ್ಬಳ್ಳಿ ಕಾರ್ಯಗಾರದಲ್ಲಿ 25 ಮೀಟರ್‌ನ 2 ಹೈಮಾಸ್ಟಗಳನ್ನು ಅಳವಡಿಸಲಾಗಿದೆ.
- ಇವುಗಳು ಸುಮಾರು 50 ಮೀಟರ್‌ಸುತ್ತ ಬೆಳಕನ್ನು ಸೂಸುವವು
- ಬಿಆರ್‌ಟಿಎಸ್ ಮತ್ತು ಮಿಶ್ರಪಥ ರಸ್ತೆಗಳ ಮಧ್ಯ 0.75 ಮೇಡಿಯನ್‌ಗಳ ಕಾರೀಡಾರ ಉದ್ದಕ್ಕೂ ಎಡ ಮತ್ತು ಬಲ ಬದಿಯಲ್ಲಿ 12 ಮೀಟರ್‌ನ ಸುಮಾರು 500 ವಿದ್ಯುತ್ ಕಂಬಗಳನ್ನು ಅಳವಡಿಸಿ ಅವುಗಳಿಗೆ 110 ವ್ಯಾಟ್‌ನ ಎಲ್‌ಇಡಿ ಬಲ್ಪಗಳನ್ನು ಅಳವಡಿಸಲಾಗುವುದು
- ಮೇಲ್‌ಸೇತರುವೆಗಳಿಗೆ 7ಮೀಟರ್ ಕಂಬದ 90 ವ್ಯಾಟ್ ಎಲ್‌ಇಡಿ ಬಲ್ಪಗಳನ್ನು ಅಳವಡಿಸಲಾಗುವುದು.

## ಪಾದಚಾರಿ ಮಾರ್ಗಗಳು

ಹುಬ್ಬಳ್ಳಿಯ ಹೊಸೂರು ವೃತ್ತದಿಂದ ಧಾರವಾಡದ ಜುಬ್ಲಿ ವೃತ್ತದವರೆಗೆ ಮಿಶ್ರಪಥಕ್ಕೆ ಹೊಂದಿಕೊಂಡಂತೆ ಪಾದಚಾರಿ ಮಾರ್ಗಗಳನ್ನು ನಿರ್ಮಿಸಲಾಗಿದೆ. ನಗರ ವ್ಯಾಪ್ತಿಯಲ್ಲಿ ಅಂದರೆ ಹೊಸೂರು ವೃತ್ತದಿಂದ ನವೀನ ಹೊಟೇಲ್‌ವರೆಗೆ ಮತ್ತು ಧಾರವಾಡದ ಗಾಂದಿ ನಗರದಿಂದ ಜುಬ್ಲಿ ವೃತ್ತದವರೆಗೆ 2.5 ಮೀಟರ್ ಗ್ರಾಮ ವ್ಯಾಪ್ತಿಯಲ್ಲಿ ಅಂದರೆ ನವೀನ್ ಹೊಟೇಲ್ ದಿಂದ ಧಾರವಾಡದ ಗಾಂದಿ ನಗರದವರೆಗೆ 1.5 ಮೀಟರ್ ಪಾದಚಾರಿ ಮಾರ್ಗಗಳನ್ನು ರಚಿಸಿ ಅದರ ಪಕ್ಕದಲ್ಲಿಯೆ ವಿದ್ಯುತ್ ಕಂಬಗಳನ್ನು ನೆಟ್ಟು ವಿದ್ಯುತ್‌ನ ವ್ಯವಸ್ಥೆಯನ್ನು ಮಾಡಲಾಗಿದೆ. ಇದರಿಂದಾಗಿ ಸಾರ್ವಜನಿಕರು ಪಾದಚಾರಿ ಮಾರ್ಗದಿಂದ ಒಂದು ಕಡೆಯಿಂದ ಇನ್ನೊಂದು ಕಡೆಗೆ ಸುರಕ್ಷತೆಯಿಂದ ಪಾದಚಾರಿ ಮಾರ್ಗವನ್ನು ಬಳಸಿ ಪ್ರಯಾಣಿಸಬೇಕು. ಇದರಿಂದಾಗಿ ಅಪಘಾತಗಳು ಕಡಿಮೆ ಯಾಗುವವು.

## Overall content

Hubballi-Dharwad Bus Rapid Transit System project is taken up in response to the commuters need for fast reliable safe and comfortable commuting option. The BRTS project is a World Bank GEF assisted sustainable Urban Transport Project (SUTP) which is being implemented by a special purpose vehicle. Hubballi-Dharwad BRTS Company Limited.

The Hubballi-Dharwad Bus Rapid Transit System Project aimed at improving bus services in the Hubballi and Dharwad twin cities including the implementation of 22Km BRTS lane.

The BRTS corridor includes segregated bus lanes access controlled bus stations, physical and fare integrated with BRT feeder ,off board ticketing through smart cards and tickets, intelligent transport system component and high quality buses(Standard as well as articulated).

**Land Acquisition and rehabilitation and resettlement**

Land acquisition is being done as per the Karnataka Highway Act ,KRDCL is the Land acquisition agency and chief Engineer ,KRDCL is the Highway authority for the project as per the JMC the total extent of land acquired is 72 Acre 299 .The corridor is divided in to two cross sections of 35mtr and 44 mtr .The 35mtr cross section starts from Hosur circle to Naveen hotel and 44mtr from Naveen Hotel to Gandhinagar and again 35 mtr from Gandhinagar to Jubilee circle .There are 33 bus stations with intelligent Transport System installed.

BRTS Facilities:

- Hubli Depot & Workshop.
- Hosur Interchange & Divisional workshop
- 33Bus stations from Hubli Railway station-Jubilee circle
- Dharwad depot
- Dharwad Old City Bus Terminals
- 3 Grade separators Unkal cross,Unkal,Navanagr
    - 6 Foot over Bridges: Hosur Interchange (Mahila Vidhyapeeth) Bus Station, Prerana college Bus Station, Unkal Bus Station, Navanagar bus

Station, Rayapur Bus station and SDM Medical Bus stations have the FOBs.

BRTS Buses

- 100 standard buses-12mtr long Volvo buses
- 30 Articulated buses -18mtr long total buses
- 120 Feeder buses
- GPS installed in buses.

Green BRTS

- Under Green BRTS 25400 saplings have been planted .There is a target of 27510 plantation wherein balance 2100 will be planted along the corridor.

Bus stations and its facilities:

- There are 33 bus stations from railway station Hubli to Jubilee Circle.
- Bus stations are installed with LED display which displays Bus information.
- High-end fare gates are installed
- Tickets are purchased at ticket counters.
- Level boarding for handicapped
- Tactile tiling for blind people.

Foot Over Bridges

- There are 6 FOB's in the corridor
- these Fobs' are facilitated with lifts for senior citizen and handicapped,
- The FOB's are approached by ramps.

Intelligent Transport System:

- LED Display of Bus information
- The junctions are installed with signals and pedestrian crossing markings.
  - Control center is established at Hosur interchange to overlook all the activities on the corridor pertaining to traffic.
  - Vehicle tracking system GPS devises are installed on all the buses
  - Automated ticketing system is installed.

Traffic Signal System

- There is complete hardware which is requires for 29 vehicle actuated signalized intersections
- 10 pedestrian only midblock signals in HDBRTS Corridor.
- 14 vehicle actuated signal Intersection in Non BRT corridor.
- Central system hardware and central adaptive control software fr the traffic signal heads.
- Vehicle detectors.

Traffic Management Centre (TMC)

- The systems installed across the BRT corridor will be monitored and controlled from a control location. This central location .This central location called the control centre or traffic management centre houses the central hardware and software required to monitor and control the ITS components deployed across the corridor and the city for the project .The TMC located in Hubli includes .
  - Work stations for operators for the purpose of controlling and managing the termination.
  - Houses the central server of the subsystem.

Signal system Implementation

- The latest generation of ATCS (Adaptive Traffic Control System) Compatible traffic signal controller, model CUTE (CDAC Urban Traffic

Control Equipment) from CDAC is installed at every traffic junctions to control the traffic signals.

**Term and conditions:**

1. The competition is binded by the terms and conditions.
2. The short movie shall be of 10-15 minutes duration.
3. Last date of submission of application -05-12-2018.
4. You are solely responsible for your safety during the shoot.
5. Last date of submission of short movie-15-12-2018.
6. The video quality shall be of HD quality and editable.
7. Video submitted shall be in Kannada and English version.
8. The video shall not contain any religious content advertisement.
9. The video shall not contain any watermarks pertaining to organisation or individuality.
10. No background music pertaining to films shall be entertained.
11. Applicants can download the application and other details form HDBRTS website.
12. Date and duration of the shoot should be intimated to this office.
13. The subject of the video and ID card should be collected from this office
14. No equipment support will be provided from this office.
15. 3 copies of the video (DVD, HD video) should be submitted to this office and uploading of the same is prohibited.
16. Video once submitted to this office will bear the ownership.
17. Acceptance/Rejection of any videos solely based on discretion of the company.